॥ಶ್ರೀ ಉರಗಾದ್ರಿವಾಸ ವಿಠಲಾಭಿನ್ನ
ಶ್ರೀ ಗುರು ಗೋವಿಂದ ವಿಠಲಾತ್ಮಕ
ಶ್ರೀ ಉದಯಾದ್ರೀಶ ವಿಠಲಪ್ರಸೀದ॥

॥ಶ್ರೀ ಅಹೋಬಲ ಲಕ್ಷ್ಮೀ ನರಸಿಂಹಾಯ ನಮಃ
ಶ್ರೀ ಲಕ್ಷ್ಮೀ ವೆಂಕಟೇಶೋ ವಿಜಯತೇ॥

॥ಶ್ರೀಯಃ ಕಾಂತಾಯ ಕಲ್ಯಾಣ ನಿಧಿಯೇ ನಿಧಯೇರ್ತಿನಾಂ
ಶ್ರೀಮದ್ ವೆಂಕಟನಾಥಾಯ ಶ್ರೀನಿವಾಸಾಯ ಮಂಗಳಂ॥

ಸ್ವಸ್ತಿಶ್ರೀ ಶ್ವೇತವರಾಹ ಕಲ್ಪ ವೈವಸ್ವತ ಮನ್ವಂತರದ 28ನೇ ಕಲಿಯುಗದ ಚಾಂದ್ರಮಾನದ ಸ್ವಭಾನುನಾಮ ಸಂವತ್ಸರದ ವೈಶಾಖ ಶುದ್ಧ ದಶಮಿ ರವಿವಾರ ದಿನಾಂಕ : 11-5-2003 ಈ ಶುಭ ದಿನದಂದು ಸಲ್ಲುವ ಶುಭ ಲಗ್ನದಲ್ಲಿ.

ಶ್ರೀ ರಮಣನೂ, ಸರ್ವೇಶನೂ, ಸಾರಭೋಕ್ಷನೂ, ಸ್ವತಂತ್ರನೂ, ಸರ್ವದನೂ, ಅಪಾರ ಮಹಿಮನೂ, ಉದಾರನೂ, ಅನಂತ ಕಲ್ಯಾಣಗುಣಗಣಪರಿಪೂರ್ಣನೂ, ಅಶೇಷ ದೋಷ ವಿದೂರನೂ, ಸ್ವಗತ ಭೇದ ವಿವರ್ಜಿತನೂ, ಬ್ರಹ್ಮಾದಿ ವೃಂದಾರಕ ವೃಂದವಂದಿತ ದಿವ್ಯಚರಣನೂ, ಶ್ರೀಮದಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕನೂ ಸಮಸ್ತ ವೇದ ವೇದಾಂತ ಪುರಾಣ ಮುಖ್ಯ ಪ್ರತಿ ಪಾದ್ಯನೂ, ಅನವರತ ಇಂದಿರಾರಾಧ್ಯ ಮುಕ್ತಾಮುಕ್ತ ಸೇವಿತನೂ, ಸಪ್ತಗಿರಿಗಳ ಒಡೆಯನೂ, ಅಮದಾನಂದ ಸಾಂದ್ರನೂ ಶ್ರೀ ಮದಾನಂದತೀರ್ಥ ಭಗವತ್ಪಾದಾಚಾರ್ಯಾಂತರ್ಗತನೂ, ಯಯಾತಿರಾಜನ ಪ್ರಪೌತ್ರನೂ, ಶೂರಸೇನ ರಾಜನ ಪೌತ್ರನೂ, ವಸುದೇವ ಪುತ್ರನೂ ವಸಿಷ್ಠ ಗೋತ್ರೋತ್ಪನ್ನನೂ ಆಗಿರುವ,

ಶ್ರೀ ಶ್ರೀನಿವಾಸ
ಎಂಬ ವರೋತ್ತಮನ ಕಲ್ಯಾಣ ಮಹೋತ್ಸವವನ್ನು

ಜಗದುದರನತಿ ವಿಮಲ ಗುಣ ರೂಪಗಳ ನಾಲೋಚ ನದಿ ಭಾರತ ನಿಗಮ ತತಿಗಳತಿ ಕ್ರಮಿಸಿ ಕ್ರಿಯಾ ವಿಶೇಷಗಳ ಬಗೆ ಬಗೆಯ ನೂತನವ ಕಾಣುತ ಮಿಗೆ ಹರುಷದಿಂ ಪೊಗಳಿ ಹಿಗ್ಗುವವಳೂ, ತ್ರಿಗುಣಮಾನಿಯೂ, ಕೋಟಿ ಕೋಟಿ ಭೃತ್ಯರಿರಲು ಹಾಟಕಾಂಬರನ ಸೇವೆಯನ್ನು ಸಾಟಿಯಿಲ್ಲದೆ ಮಾಡಿ ಪೂರ್ಣ ನೋಟದಿಂದ ಸುಖಿಸುವವಳೂ, ನಿತ್ಯಮುಕ್ತಳೂ,

ಮುಕ್ತಾऽ ಮುಕ್ತಗಣ ಸೇವಿತಳೂ, ಬ್ರಹ್ಮರುದ್ರಾದಿವಂದಿತಳೂ, ಸಮಾऽಸಮ ಎಂದು ಪ್ರಸಿದ್ಧಳೂ, ನಿತ್ಯಸುಮಂಗಳೆಯೂ, ಸುವೀರರಾಜನ ಪ್ರಪೌತ್ರಿಯೂ, ಆಕಾಶರಾಜನ ಪುತ್ರಿಯೂ, ಅತ್ರಿಗೋತ್ರೋತ್ಪನ್ನಳೂ ಆಗಿರುವ

ಶ್ರೀ ಪದ್ಮಾವತೀ

ಎಂಬ ಕನ್ಯಾಮಣಿಯೊಂದಿಗೆ

ನಮ್ಮ ಸ್ವಗೃಹದಲ್ಲಿ ಬ್ರಹ್ಮಾದಿ ದೇವತೆಗಳ ಸಮಕ್ಷಮದಲ್ಲಿ ಶ್ರೀ ಹರಿವಾಯುಗುರುಗಳ ಪ್ರೇರಣಾನುಸಾರ ಶ್ರೀ ಹರಿವಾಯು ಗುರುಗಳ ಪ್ರಿತ್ಯರ್ಥವಾಗಿ ಹಾಗೂ ವಿಶ್ವ ಕಲ್ಯಾಣಕ್ಕಾಗಿ ಈ ಕಲ್ಯಾಣ ಮಹೋತ್ಸವವನ್ನು ನೆರವೇರಿಸಲು ಗುರು ಹಿರಿಯರು ಸಂಕಲ್ಪಿಸಿರುವರು. ಸಕಲ ಭಗವದ್ಭಕ್ತರೂ ಬಂಧುಮಿತ್ರವರ್ಗ ಸಮೇತವಾಗಿ ಆಗಮಿಸಿ ಈ ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡು ನಿತ್ಯಾऽವಿಯೋಗಿ ನಿತ್ಯನೂತನ ದಂಪತಿಗಳ ಅನುಗ್ರಹವನ್ನು ಪಡೆದು ಕೃತಾರ್ಥರಾಗಬೇಕೆಂದು ಅಪೇಕ್ಷಿಸುತ್ತೇವೆ.

ತಮ್ಮ ಆಗಮನಾಭಿಲಾಷಿ
ಉದಯಾದ್ರೀಶವಿಠಲದಾಸ
(ಹೆಚ್.ವಿ. ಗೋಪಾಲರಾವ್)

ಕಾರ್ಯಾಧ್ಯಕ್ಷರು	-	ಬ್ರಹ್ಮವಾಯುಗಳು
ಕಾರ್ಯದರ್ಶಿಗಳು	-	ಗರುಡ ಶೇಷರುದ್ರರು
ಕಾರ್ಯಕರ್ತರು	-	ಸಕಲ ತತ್ವಾಭಿಮಾನಿ ದೇವತೆಗಳು